**PW-1**

**ಸಾಕ್ಷಿಯನ್ನು ದಿಃ 05.04.2022 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ 5 ರಿಂದ 7 ಪ್ರತಿವಾದಿಯರ ಪರವಾಗಿ ಶ್ರೀ ಜಿ.ಸಿ.ಹೆಚ್. ರವರಿಂದಃ</u>**

ನಾನು ಎಸ್.ಎಸ್.ಎಲ್.ಸಿ. ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು 3 ಐಟಂಗಳಿಗಾಗಿ ದಾವೆಯನ್ನು ಹೂಡಿರುತ್ತೇನೆ. ಈ ದಾವೆಯನ್ನು ನಾನು ಸರ್ಕಾರದ ವಿರುದ್ಧ ಹಾಕಿರುತ್ತೇನೆ. ಸರ್ಕಾರವನ್ನು ಬಿಟ್ಟು ಬೇರೆ ಯಾರ ಮೇಲೆಯೂ ನಾನು ದಾವೆ ಹೂಡಿಲ್ಲ. ಸರ್ವೇ ನಂಬರ್ 51/1 ರ ಚೆಕ್ಕುಬಂದಿ ಪೂರ್ವಕ್ಕೆ ಮುನಿತೋಟಿಯವರ ಆಸ್ತಿ, ಪಶ್ಚಿಮಕ್ಕೆ ಸರ್ಕಾರಿ ಗೋಮಾಳ, ಉತ್ತರಕ್ಕೆ ಆರ್.ಮುನಿಯಪ್ಪರವರ ಆಸ್ತಿ ಮತ್ತು ದಕ್ಷಿಣಕ್ಕೆ ಸರ್ವೇ ನಂಬರ್ 51/2 ಇರುತ್ತದೆ. ಸರ್ವೇ ನಂಬರ್ 51/2 ರ ಚೆಕ್ಕುಬಂದಿ ಪೂರ್ವಕ್ಕೆ ಮುನಿತೋಟಿಯವರ ಆಸ್ತಿ, ಪಶ್ಚಿಮಕ್ಕೆ ಸರ್ಕಾರಿ ಗೋಮಾಳ, ಉತ್ತರಕ್ಕೆ ಸರ್ವೇ ನಂಬರ್ 51/1 ಮತ್ತು ದಕ್ಷಿಣಕ್ಕೆ ಸರ್ವೇ ನಂಬರ್ 51/3 ಇರುತ್ತದೆ. ಸರ್ವೇ ನಂಬರ್ 51/3 ರ ಚೆಕ್ಕುಬಂದಿ ಪೂರ್ವಕ್ಕೆ ಮುನಿತೋಟಿ ಮತ್ತು ಬಸಮ್ಮರವರ ಆಸ್ತಿ, ಪಶ್ಚಿಮಕ್ಕೆ ಸರ್ಕಾರಿ ಗೋಮಾಳ, ಉತ್ತರಕ್ಕೆ ಸರ್ವೇ ನಂಬರ್ 51/2 ಮತ್ತು ದಕ್ಷಿಣಕ್ಕೆ ವೆಂಕಟೇಶಪ್ಪರವರ ಆಸ್ತಿ, ತದನಂತರ ಗೋಮಾಳ ಇರುತ್ತದೆ.

ನಾನು ಈ ದಾವೆಯನ್ನು ನಮ್ಮ ಹೆಸರಿಗೆ ಖಾತೆ ಆಗಬೇಕೆಂದು ಹೂಡಿರುತ್ತೇನೆ. ನನಗೆ ಈ ಕೇಸಿನ ವಿಚಾರ ಏನೂ ಗೊತ್ತಿಲ್ಲ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ 65 ವರ್ಷ ವಯಸ್ಸಾಗಿದೆ ಎಂದರೆ ಸಾಕ್ಷಿಯು 75 ವರ್ಷ ವಯಸ್ಸು ಆಗಿರುತ್ತದೆ ಎಂದು ನುಡಿಯುತ್ತಾರೆ. ವಾದಿ ಆರೋಗ್ಯವಾಗಿಲ್ಲ. ವಾದಿಗೆ ಬಿ.ಪಿ. ಮತ್ತು ಶುಗರ್ ಕಾಯಿಲೆಗಳಿದ್ದು, ಸುಸ್ತು ಇದ್ದು, ಓಡಾಡಲಿಕ್ಕೆ ಆಗುವುದಿಲ್ಲ. ವಾದಿಗೆ ಕಾಯಿಲೆಗಳು ಇರುವುದನ್ನು ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ನಿ ಪಿ 1 ರಲ್ಲಿ ವಾದಿಗೆ ಕಾಯಿಲೆಗಳು ಇರುವ ಬಗ್ಗೆ ಹೇಳಿಲ್ಲ. ವಾದಿಯು ಆರೋಗ್ಯವಾಗಿದ್ದಾರೆಂದರೆ ಸರಿಯಲ್ಲ. ವಾದಿಯು ನ್ಯಾಯಾಲಯಕ್ಕೆ ಬಂದರೆ ಸತ್ಯಾಂಶ ಹೊರಗಡೆ ಬರುತ್ತದೆ ಎಂದು ನಾನು ಬಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಜಿ.ಪಿ.ಎ. ಬರೆಯಲು ಪೇಪರ್ ಅನ್ನು ನಾನೇ ತಂದಿರುತ್ತೇನೆ. ನಿ ಪಿ 1 ಕ್ಕೆ ಬಿಕ್ಲಮ್‌ದಾರರ ಋಜುವಾತು ಇಲ್ಲ ಎಂದರೆ ಸರಿ. ಮುನಿಸ್ವಾಮಪ್ಪರವರಿಗೆ ವಾದಿ ದಾಸಪ್ಪ ಮತ್ತು ಅವರ ಅಕ್ಕ ಮುನಿಯಮ್ಮ ಮಕ್ಕಳು. ಮುನಿಸ್ವಾಮಪ್ಪನಿಗೆ ಗುಳ್ಳಮ್ಮ, ಗುರಮ್ಮ ಮತ್ತು ನೀರಗಂಟಿ ಮುನಿಸ್ವಾಮಿ ರವರು ಮಕ್ಕಳು ಎಂದರೆ ಸರಿಯಲ್ಲ. ಗುಳ್ಳಮ್ಮ ಈಗ ಜೀವಂತ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ಗುರಮ್ಮಳಿಗೆ 5 ನೇ ಪ್ರತಿವಾದಿ ಮುನಿಯಪ್ಪ, ಚಿನ್ನಪ್ಪೈಯಪ್ಪ, ಬೆಳ್ಳಮ್ಮ ಮೂರು ಜನ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. 5 ನೇ ಪ್ರತಿವಾದಿಯ ಮಕ್ಕಳು 6 ಮತ್ತು 7 ನೇ ಪ್ರತಿವಾದಿಯರು ಆಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನೀರಗಂಟಿ ಮುನಿಸ್ವಾಮಿ ಅಲಿಯಾಸ್ ಮುನಿಸ್ವಾಮಪ್ಪರವರಿಗೆ ದಾಸಪ್ಪ (ವಾದಿ) ಮತ್ತು ಮುನಿಯಮ್ಮ ಮಕ್ಕಳು ಎಂದರೆ ಸರಿ. ಮುನಿಯಮ್ಮಳನ್ನು ಈ ದಾವೆಯಲ್ಲಿ ಪಕ್ಷಗಾರಳನ್ನಾಗಿ ಮಾಡಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ಅವರು ತೀರಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಮುನಿಯಮ್ಮಳಿಗೆ ಲಕ್ಷ್ಮಮ್ಮ, ವೆಂಕಟರಾಮಪ್ಪ ಎಂಬ ಇಬ್ಬರು ಮಕ್ಕಳು ಇರುತ್ತಾರೆ. ಸದರಿ ಲಕ್ಷ್ಮಮ್ಮ ಮತ್ತು ವೆಂಕಟರಾಮಪ್ಪರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. 5 ನೇ ಪ್ರತಿವಾದಿಯ ಅಕ್ಕ ಬೆಳ್ಳಮ್ಮ ಮತ್ತು ತಮ್ಮ ಚಿನ್ನಪ್ಪೈಯಪ್ಪರವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು 5 ನೇ

ಪ್ರತಿವಾದಿ ಮತ್ತು ಚಿನ್ನಪೈಯಪ್ಪ ನಮ್ಮ ತಾಯಿಯ ತಮ್ಮಂದಿರು ಎಂದು ನುಡಿಯುತ್ತಾರೆ. ಮುನಿಸ್ವಾಮಪ್ಪ ತನ್ನ ಮಗಳು ಗುರಮ್ಮಳನ್ನು ಚಿನ್ನಪ್ಪನಿಗೆ ಮದುವೆ ಮಾಡಿಕೊಟ್ಟಿದ್ದ ಎಂದರೆ ನನಗೆ ಗೊತ್ತಿಲ್ಲ. ಗುರಮ್ಮಳ ಗಂಡ ಚಿನ್ನಪ್ಪನ ಸ್ವಂತ ಊರು ಚಿಕ್ಕಕರಪನಹಳ್ಳಿ ಎಂದರೆ ನನಗೆ ಗೊತ್ತಿಲ್ಲ. ಮುನಿಸ್ವಾಮಪ್ಪ ರವರು ಚಿನ್ನಪ್ಪನನ್ನು ಮನೆ ಅಳಿಯನನ್ನಾಗಿ ಮಾಡಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ.

ವಾದಿ ಈ ದಾವೆಯನ್ನು ಹೂಡುವ ಕಾಲಕ್ಕೆ ನಾನು ವಕೀಲರ ಕಛೇರಿಗೆ ಹೋಗಿರುವುದಿಲ್ಲ. ಆದ್ದರಿಂದ ವಾದ ಪತ್ರದಲ್ಲಿ ಬರೆದಿರುವ ಯಾವುದೇ ಅಂಶಗಳು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ ವಾದಿಯು ವಕೀಲರಿಗೆ ಏನು ಮಾಹಿತಿ ಕೊಟ್ಟಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

ಮುನಿಸ್ವಾಮಿ, ಗುರಮ್ಮ ಮತ್ತು ಚಿನ್ನಪ್ಪ ಈ ಮೂರು ಜನ ಮಾತ್ರ ಅವರ ಮನೆಯಲ್ಲಿ ದುಡಿಯುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಎಲ್ಲರೂ ದುಡಿದು ಬಂದ ಆದಾಯದಿಂದ ದಾವಾ ಆಸ್ತಿಗಳನ್ನು ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ಆಗ ಮನೆಯ ಯಜಮಾನಿಕೆಯನ್ನು ಮುನಿಸ್ವಾಮಪ್ಪರವರು ಮಾಡುತ್ತಿದ್ದರು ಎಂದರೆ ಸುಳ್ಳು. ನೀರಗಂಟಿ ಮುನಿಸ್ವಾಮಿ ಜೀವಂತ ಇದ್ದಾಗ ಎಲ್ಲರೂ ಒಟ್ಟಿಗೆ ವಾಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನೀರಗಂಟಿ ಮುನಿಸ್ವಾಮಿ ಮತ್ತು ಆತನ ಸಹೋದರರು ಹಾಗೂ ಮಕ್ಕಳು ಕಿತ್ತಾಡುವುದು ಬೇಡ ಎಂದು ದಾವಾ ಆಸ್ತಿಗಳ ಪೈಕಿ ಐಟಂ ನಂಬರ್ 1 ಅನ್ನು ಚಿನ್ನಪ್ಪ ಮತ್ತು ಅವರ ಮಕ್ಕಳಿಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಚಿನ್ನಪ್ಪ ದಾವಾ ಐಟಂ ನಂಬರ್ 1 ರ ಪೈಕಿ 20 ಗುಂಟೆ ಜಮೀನನ್ನು 5 ನೇ ಪ್ರತಿವಾದಿಗೆ, 19 ಗುಂಟೆ ಜಮೀನನ್ನು ಚಿನ್ನಪೈಯಪ್ಪನಿಗೆ ಕೊಟ್ಟಿರುತ್ತಾನೆ ಎಂದರೆ ಸರಿಯಲ್ಲ. ಚಿನ್ನಪೈಯಪ್ಪನ 19 ಗುಂಟೆ ಜಮೀನಿನ ದಕ್ಷಿಣಕ್ಕೆ 5 ನೇ ಪ್ರತಿವಾದಿಯ 20 ಗುಂಟೆ ಜಮೀನು ಇರುತ್ತದೆ ಎಂದರೆ ಸರಿಯಲ್ಲ. ಸದರಿ 20 ಗುಂಟೆಯಲ್ಲಿ 5 ನೇ ಪ್ರತಿವಾದಿ ಬೋರ್–ವೆಲ್ ಹಾಕಿಸಿರುತ್ತಾನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾವು

ಬೋರ್-ವೆಲ್ ಹಾಕಿಸಿರುತ್ತೇವೆ ಎಂದು ನುಡಿಯುತ್ತಾನೆ. ಹಾಗೆ ನೀವು ಬೋರ್-ವೆಲ್ ಹಾಕಿಸಿರುವುದಕ್ಕೆ ದಾಖಲೆ ಇರುತ್ತದೆಯೇ ಎಂಬ ನ್ಯಾಯಾಲಯದ ಪ್ರಶ್ನೆಗೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾನೆ. ಮತ್ತೆ ನ್ಯಾಯಾಲಯ ಸದರಿ ಬೋರ್-ವೆಲ್‌ಗೆ ವಿದ್ಯುತ್ ಸಂಪರ್ಕ ತೆಗೆದುಕೊಂಡಿರುತ್ತೀರಾ ಎಂಬ ಪ್ರಶ್ನೆಗೆ ಇಲ್ಲ ಎಂದು ನುಡಿಯುತ್ತಾನೆ. ಸದರಿ 20 ಗುಂಟೆಯಲ್ಲಿ 5 ನೇ ಪ್ರತಿವಾದಿ ಇವತ್ತಿಗೂ ಸಹಾ ಬೆಳೆ ಬೆಳೆದುಕೊಂಡು ವ್ಯವಸಾಯ ಮಾಡುತ್ತಿದ್ದಾನೆ ಎಂದರೆ ಸರಿಯಲ್ಲ. ಮುನಿಸ್ವಾಮಪ್ಪನ ಕುಟುಂಬದಲ್ಲಿ ನ್ಯಾಯಾಲಯದಲ್ಲಾಗಲೀ, ನೋಂದಣಿ ವಿಭಾಗದ ಪತ್ರದ ಮುಖಾಂತರವಾಗಲೀ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿಲ್ಲ ಎಂದರೆ ಸರಿ. ಮೌಖಿಕವಾಗಿ ಆಸ್ತಿಗಳನ್ನು ಮುನಿಸ್ವಾಮಪ್ಪ ವಿಭಾಗ ಮಾಡಿರುತ್ತಾನೆ ಎಂದರೆ ಸರಿಯಲ್ಲ. ದಾವಾ ಐಟಂ ನಂಬರ್ 1 ಆಸ್ತಿ ರೂ.35,00,000/- ಬೆಲೆ ಬಾಳುತ್ತದೆ ಎಂದರೆ ಸರಿಯಲ್ಲ. ಸದರಿ ಮೊತ್ತಕ್ಕೆ ನಾನು ನ್ಯಾಯಾಲಯಕ್ಕೆ ಕೋರ್ಟ್-ಫೀ ಕಟ್ಟಿಲ್ಲ ಎಂದರೆ ಸರಿಯಲ್ಲ. ಈ ನ್ಯಾಯಾಲಯದ ವ್ಯಾಪ್ತಿಗೆ ಈ ದಾವೆ ಬರುವುದಿಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗಾಗಿ ವಕೀಲರು ಕಾಲಾವಕಾಶ ಕೋರಿದ್ದು, ಅದರಂತೆ ಕಾಲಾವಕಾಶ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**(ಅಜಿತ್ ದೇವರಮನಿ)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,**
**ಬಂಗಾರಪೇಟೆ**